# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ, ನವನಗರ, ಹುಬ್ಬಳ್ಳಿ- 580 025.
**Company Identity Number[CIN]: U04010KA2002PLC030437**

## ನೇಮಕಾತಿ- ಕಾಯ್ದಿರಿಸಿದ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ

## ಅಧಿಸೂಚನೆ

ಕ್ರಮ ಸಂಖ್ಯೆ: ಹೆಚ್.ಸಿ.ಓ.-07/ಸಿ.-81/2017-18, ದಿನಾಂಕ: **06ನೇ ಜೂನ, 2020**.

ವಿಷಯ: **ಸಹಾಯಕ ಲೆಕ್ಕಾಧಿಕಾರಿ, ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳ ಕಾಯ್ದಿರಿಸಿದ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಕುರಿತು.**

ಉಲ್ಲೇಖ: 1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 40360/ 2016-17, ದಿನಾಂಕ: 08.09.2016.
2. ನೇಮಕಾತಿ- ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿ [ಹೆಚ್ಚುವರಿ] ಪ್ರಕಟಣೆ ಅಧಿಸೂಚನೆ: ಹೆಚ್.ಸಿ.ಓ.-07/ಸಿ.-81/ 2017-18, ದಿನಾಂಕ: 29.02.2020.

********

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 40360/ 2016-17, ದಿನಾಂಕ: 08.09.2016 ಕ್ಕೆ ಅನುಗುಣವಾಗಿ, Online Aptitude Test ನಲ್ಲಿ ಗಳಿಸಿರುವ ಅಂಕ/ Equi-Percentile ಜ್ಯೇಷ್ಠತೆ ಮತ್ತು ಅಭ್ಯರ್ಥಿಗಳ ದಾಖಲಾತಿಗಳನ್ನಾಧರಿಸಿ, ಸಹಾಯಕ ಲೆಕ್ಕಾಧಿಕಾರಿ, ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ, ಕಾಲ ಕಾಲಕ್ಕೆ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸರಕಾರದ ನಿಯಮಾವಳಿಗಳನುಸಾರ ಅರ್ಹತೆ ಹಾಗೂ ಶ್ರೇಷ್ಠತೆಯ ಆಧಾರದಲ್ಲಿ, ಆಯ್ಕೆಯಾಗಿರುವ ಅಭ್ಯರ್ಥಿಗಳ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು, ಕಟ್–ಆಫ್ [Cut-Off] ಅಂಕಗಳೊಂದಿಗೆ ಹು.ವಿ.ಸ.ಕಂ.ನಿ. ಅಂತರ್ಜಾಲದಲ್ಲಿ ಉಲ್ಲೇಖ [2] ರ ಹು.ವಿ.ಕಂ.ನಿ.ಯ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಸದರಿ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಈ ಮೇಲ್ ಮೂಲಕ ಸಲ್ಲಿಸಿರುವ ಅರ್ಹ ಆಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿರುತ್ತದೆ. ಅದರನ್ವಯ, ಆಕ್ಷೇಪಣಾವಾರು ಅನುಸರಣಾ ವಿವರಣಾ ಪಟ್ಟಿ [ಅನುಬಂಧ: 01 ರಿಂದ 03], ಕಾಯ್ದಿರಿಸಿದ ಅಂತಿಮ ಆಯ್ಕೆ ಪಟ್ಟಿ [ಅನುಬಂಧ: 04 ರಿಂದ 06] ಯನ್ನು, ಕಟ್–ಆಫ್ [Cut-Off] ಅಂಕ [ಅನುಬಂಧ: 07 ರಿಂದ 09] ಗಳೊಂದಿಗೆ ಹು.ವಿ.ಸ.ಕಂ.ನಿ. ಯ ಅಂತರ್ ಜಾಲ [www.hescom.co.in] ದಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ಕಾಯ್ದಿರಿಸಿದ ಅಂತಿಮ ಆಯ್ಕೆ ಪಟ್ಟಿಯನ್ವಯ ಆಯ್ಕೆಯಾಗಿರುವ **ಸಹಾಯಕ ಲೆಕ್ಕಾಧಿಕಾರಿ, ಸಹಾಯಕ ದಿನಾಂಕ: 15.06.2020** ರಂದು ಬೆಳಿಗ್ಗೆ **11:00** ಮತ್ತು **ಕಿರಿಯ ಸಹಾಯಕ ಅಭ್ಯರ್ಥಿಗಳ ಸ್ಥಳ ನಿಯುಕ್ತಿಗಾಗಿ, ದಿನಾಂಕ: 16.06.2020** ರಂದು ಬೆಳಿಗ್ಗೆ **11:00** ಗಂಟೆಗೆ ಕೌನ್ಸಿಲಿಂಗ್ ನಡೆಸಲಾಗುತ್ತಿರುವುದರಿಂದ, ಅಭ್ಯರ್ಥಿಗಳು ತಮ್ಮ ಮೂಲ ಗುರುತಿನ ಚೇಟಿ [ಆಧಾರ್ ಕಾರ್ಡ್ / ವೋಟರ್ ಕಾರ್ಡ್ / ಚಾಲನಾ ಪರವಾನಗಿ / ಪಾಸ್ ಪೋರ್ಟ್ / ಪ್ಯಾನ್ ಕಾರ್ಡ್] ಹಾಗೂ ಗುರುತಿನ ಚೇಟಿಯ ಸ್ವ-ದೃಢೀಕೃತ ಪ್ರತಿಯೊಂದಿಗೆ, **ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ನವನಗರ, ಹುಬ್ಬಳ್ಳಿ 580 025** ಇಲ್ಲಿ ತಪ್ಪದೆ ಹಾಜರಾಗಲು ತಿಳಿಸಿದೆ.

ಕೌನ್ಸಿಲಿಂಗ್ ಗಾಗಿ ಕಾಯ್ದಿರಿಸಿದ ಅಂತಿಮ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಮೆರಿಟ್ ಅನುಸಾರ ಹಾಗೂ ಹು.ವಿ.ಸ.ಕಂ.ನಿ. ಯ ಲೆಕ್ಕ ಘಟಕಗಳಿಗೆ ಅವಶ್ಯಕತೆ ಆಧಾರದ ಮೇಲೆ ಸ್ಥಳ ನಿಯುಕ್ತಿಗೆ ಕೌನ್ಸಿಲಿಂಗ್ ನಿಗದಿಪಡಿಸಲಾಗಿದೆ. ನಿಗದಿಪಡಿಸಿರುವ ಕೌನ್ಸಿಲಿಂಗ್ ದಿನಾಂಕದಂದು ಕಾಯ್ದಿರಿಸಿದ ಅಂತಿಮ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಜರಾಗದಿದ್ದಲ್ಲಿ, ಕೌನ್ಸಿಲಿಂಗ್ ನಂತರ ಖಾಲಿ ಉಳಿಯುವ, ಹು.ವಿ.ಸ.ಕಂ.ನಿ. ವ್ಯಾಪ್ತಿಯ ಯಾವುದಾದರೂ ಕಛೇರಿಗೆ ಅಭ್ಯರ್ಥಿಗಳನ್ನು ನಿಯೋಜಿಸಲಾಗುವುದು. ಕೌನ್ಸಿಲಿಂಗ್ ನಿಗದಿಪಡಿಸಿರುವ ದಿನಾಂಕವನ್ನು ಹೊರತುಪಡಿಸಿ ಇನ್ಯಾವುದೇ ದಿನಾಂಕದಂದು ಕೌನ್ಸಿಲಿಂಗ್ ನಡೆಸಲಾಗುವುದಿಲ್ಲ.

ಮುಂದುವರೆದು, ಆಯ್ಕೆಗೊಂಡಿರುವ ಅಭ್ಯರ್ಥಿಗಳ ಪೂರ್ವ ಚರಿತ್ರೆಯ ವರದಿಯನ್ನು ನೀಡುವಂತೆ ಕೋರಿ ಅಭ್ಯರ್ಥಿಗಳು ಆನ್-ಲೈನ್ ಅರ್ಜಿಯಲ್ಲಿ ಒದಗಿಸಿರುವ ವಿಳಾಸದ ವ್ಯಾಪ್ತಿಯ ಜಿಲ್ಲೆಯ ಪೊಲೀಸ್ ಅಧೀಕ್ಷಕರುಗಳಿಗೆ ಪತ್ರವನ್ನು ಬರೆಯಲಾಗುವುದು. ಹಾಗೂ ವಿವಿಧ ಪ್ರವರ್ಗಗಳಡಿಯಲ್ಲಿ ಹಾಗೂ ಸಾಮಾನ್ಯ ವರ್ಗದ ಗ್ರಾಮೀಣ ವೀಸಲಾತಿ ಕೋಟಾದಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಮೂಲ ದಾಖಲಾತಿ ಪರಿಶೀಲನಾ ವೇಳೆಯಲ್ಲಿ ಸಲ್ಲಿಸಿದ್ದ ಮೂಲ ಜಾತಿ/ ಆದಾಯ ಪ್ರಮಾಣ ಪತ್ರವನ್ನು ಪರಿಶೀಲಿಸಿ, ಸಿಂಧುತ್ವ ಪ್ರಮಾಣ ಪತ್ರ ನೀಡುವಂತೆ/ ಮೇಲು ಸ್ಥರಕ್ಕೆ ಸೇರಿಲ್ಲವೆಂದು ದೃಢಿಪಡಿಸುವಂತೆ ಕೋರಿ ಸಂಬಂಧಿಸಿದ ಜಿಲ್ಲಾಧಿಕಾರಿರವರಿಗೆ ಪತ್ರ ಬರೆಯಲಾಗುವುದು. ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿ/ ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆಯನ್ನು ಅವುಗಳನ್ನು ವಿತರಿಸಿದ ವಿಶ್ವವಿದ್ಯಾಲಯಗಳು/ ಶೈಕ್ಷಣಿಕ ಪರೀಕ್ಷಾ ಮಂಡಳಿಗಳಿಗೆ ಪರಿಶೀಲನೆ ಹಾಗೂ ನೈಜತೆಯನ್ನು ದೃಢೀಕರಿಸಿ ಕಳುಹಿಸುವಂತೆ ಸಂಬಂಧಿಸಿದ ಕುಲಸಚಿವರವರಿಗೆ ಪತ್ರ ಬರೆಯಲಾಗುವುದು ಸದರಿ ಪತ್ರಗಳ ಪ್ರತಿಯನ್ನು ಅಭ್ಯರ್ಥಿಗಳಿಗೆ ಮಾಹಿತಿಗಾಗಿ ರವಾನಿಸಲಾಗುವುದು. ಆಯ್ಕೆಗೊಂಡಿರುವ ಅಭ್ಯರ್ಥಿಗಳು ಸಂಬಂಧಿಸಿದ ಪೊಲೀಸ್ ಅಧೀಕ್ಷಕರು, ಜಿಲ್ಲಾಧಿಕಾರಿ ಹಾಗೂ ವಿಶ್ವವಿದ್ಯಾಲಯ ರವರ ಕಛೇರಿಯಿಂದ ಕೋರುವ ಅಗತ್ಯ ದಾಖಲೆ/ ಮಾಹಿತಿಯನ್ನು ಜರೂರಾಗಿ ಒದಗಿಸಿ ಸಹಕರಿಸಬೇಕೆಂದು ತಿಳಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾ.ಸಂ.ಅ]